# ಆರೋಗ್ಯ ಕಾರ್ಡ್

## ಡಿಜಿಟಲ್ ರೂಪ




■ **ಶಶಿಕುಮಾರ್ ಸಿ.**

ಆಯುಷ್ಮಾನ್ ಭಾರತ ಯೋಜನೆಯಡಿ ಪ್ರತಿ ಪ್ರಜೆಗೂ ಡಿಜಿಟಲ್ ರೂಪದ 'ಆರೋಗ್ಯ ಕಾರ್ಡ್' ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರವು ಇಡೀ ದೇಶಕ್ಕೆ ವಿಸ್ತರಿಸಿದೆ. ಈ ಕಾರ್ಡ್ ಅನ್ನು ವ್ಯಕ್ತಿಯೊಬ್ಬರ ಸಮಗ್ರ ಆರೋಗ್ಯ ಮಾಹಿತಿಯ ಕಣಜ ಎನ್ನಬಹುದು. ಹಣಕಾಸಿನ ವ್ಯವಹಾರಕ್ಕೆ ಇರುವ ಬ್ಯಾಂಕ್ ಖಾತೆಯಂತೆಯೇ ಇದು ಆರೋಗ್ಯದ ಮಾಹಿತಿ ಸಂಗ್ರಹಣಕ್ಕೆ ಇರುವ ಆರೋಗ್ಯ ಖಾತೆ.

ವ್ಯಕ್ತಿಯ ವೈದ್ಯಕೀಯ ಪರೀಕ್ಷೆ, ರೋಗದ ವಿಧ, ವೈದ್ಯರು ನೀಡಿದ ಪ್ರಿಸ್ಕ್ರಿಪ್ಷನ್, ಔಷಧಗಳು, ಚಿಕಿತ್ಸೆಗಳು ಮತ್ತು ತೆಗೆದುಕೊಂಡ ರೋಗನಿರ್ಣಯದ ವಿವರಗಳು ಸೇರಿದಂತೆ ಎಲ್ಲ ರೀತಿಯ ವೈದ್ಯಕೀಯ ದಾಖಲೆಗಳನ್ನು ಸಮ್ಮತಿ ಮೇರೆಗೆ ಸಂಗ್ರಹಿಸಿಡುವ ಕಣಜ. ಒಂದು ವೇಳೆ ವ್ಯಕ್ತಿಯು ಬೇರೆ ಬೇರೆ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆಯುವ ಸಂದರ್ಭ ಎದುರಾದಾಗ ಆರೋಗ್ಯ ಕಾರ್ಡ್‌ನಲ್ಲಿರುವ ಹೆಲ್ತ್ ಹಿಸ್ಟರಿಯನ್ನು ಆಧರಿಸಿ ಚಿಕಿತ್ಸೆ ನೀಡಲು ವೈದ್ಯರಿಗೆ ಸಹಕಾರಿಯಾಗುತ್ತದೆ. ಮೊಬೈಲ್ ಮೂಲಕವೂ ಕಾರ್ಡ್‌ನಲ್ಲಿರುವ ಮಾಹಿತಿ ನೋಡಬಹುದು. ಈ ಯೋಜನೆ ವ್ಯಾಪ್ತಿಗೆ ಒಳಪಡುವ ಆಯ್ಕೆ ಐಚ್ಛಿಕ.

ಸರ್ಕಾರದ ಆರೋಗ್ಯ ಸೇವೆಗಳನ್ನು ವಿದ್ಯುನ್ಮಾನ ರೂಪದಲ್ಲಿ ಸಾರ್ವಜನಿಕರಿಗೆ ತಲುಪಿಸುವ ಡಿಜಿಟಲ್ ಇಂಡಿಯಾ ಅಭಿಯಾನದ ಭಾಗವೇ ಈ ಆರೋಗ್ಯ ಕಾರ್ಡ್. ಇದಕ್ಕಾಗಿ ವೈದ್ಯಕೀಯ ದಾಖಲೆಗಳು ಮತ್ತು ದತ್ತಾಂಶಗಳ ಡಿಜಿಟಲೀಕರಣ ಅತ್ಯಗತ್ಯ. ವೈದ್ಯರು, ಆಸ್ಪತ್ರೆಗಳು ಮತ್ತು ಆರೋಗ್ಯ ಸೇವಾ ಪೂರೈಕೆದಾರ ನಡುವೆ ಗೊಂದಲ ರಹಿತ, ಸುಲಭ ಸಂವಹನ ವ್ಯವಸ್ಥೆ ಕಲ್ಪಿಸುವುದು ಈ ಯೋಜನೆ ಜಾರಿಯ ಉದ್ದೇಶ ಎಂದಿದೆ ಕೇಂದ್ರ ಆರೋಗ್ಯ ಸಚಿವಾಲಯ.

### ಕಾರ್ಡ್ ರೂಪ

ಈ ಕಾರ್ಡ್ 14 ಅಂಕಿಗಳನ್ನು ಒಳಗೊಂಡ ವಿಶಿಷ್ಟ ಗುರುತಿನ ಸಂಖ್ಯೆ ಆರೋಗ್ಯ ಕಾರ್ಡ್ ಒಳಗೊಂಡಿರುತ್ತದೆ. ಕ್ಯೂರ್‌ಆರ್ ಕೋಡ್ ಸ್ಕ್ಯಾನ್ ಆಯ್ಕೆಯೂ ಇದೆ. ನೋಂದಣಿ ವೇಳೆ ವ್ಯಕ್ತಿ ನೀಡುವ ಪ್ರಾಥಮಿಕ ಮಾಹಿತಿ ಆಧರಿಸಿ, ವೈಯಕ್ತಿಕ ಆರೋಗ್ಯ ದಾಖಲೆ ಸಿದ್ಧವಾಗುತ್ತದೆ.

### ನೋಂದಣಿ ಎಲ್ಲಿ?

ಹೆಲ್ತ್ ಕಾರ್ಡ್ ವೆಬ್ ಪೋರ್ಟಲ್ (https://healtid.ndhm.gov.in) ಮೂಲಕ ಆರೋಗ್ಯ ಕಾರ್ಡ್‌ಗೆ ನೋಂದಣಿ ಮಾಡಿಕೊಳ್ಳಬಹುದು. ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಅಧೀನದ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ABDM) ಹಾಗೂ ನ್ಯಾಷನಲ್ ಡಿಜಿಟಲ್ ಹೆಲ್ತ್ ಮಿಷನ್ ಹೆಲ್ತ್ ರೆಕಾರ್ಡ್ಸ್ (NDHM Health Records) ಆ್ಯಪ್‌ಗಳ ಮೂಲಕವೂ ನೋಂದಣಿ ಮಾಡಿಕೊಳ್ಳಬಹುದು. ಆಧಾರ್ ಸಂಖ್ಯೆ ಅಥವಾ ಮೊಬೈಲ್ ಸಂಖ್ಯೆ ಮೂಲಕ ಹೆಸರು, ಜನ್ಮದಿನಾಂಕ, ಲಿಂಗ, ವಿಳಾಸದ ಮಾಹಿತಿ ನೀಡಿ ನೋಂದಾಯಿಸಿಕೊಳ್ಳಬಹುದು. ಆಧಾರ್ ಸಂಖ್ಯೆ ಇಲ್ಲಿ ಐಚ್ಛಿಕ.

ಕಾರ್ಡ್ ಹೊಂದಿದ ವ್ಯಕ್ತಿಗೆ, ಯಾವಾಗ ಬೇಕಿದ್ದರೂ ಅದನ್ನು ರದ್ದುಪಡಿಸುವ ಮತ್ತು ಅದರಲ್ಲಿರುವ ಮಾಹಿತಿ ಅಳಿಸುವ ಅಧಿಕಾರವಿದೆ. ಅದಕ್ಕೆ ಹಲವು ರೀತಿಯ ಪ್ರಕ್ರಿಯೆವಿದೆ. ಅದನ್ನು ಅನುಸರಿಸಿದ ನಂತರವಷ್ಟೇ ಕಾರ್ಡ್ ರದ್ದು ಪಡಿಸಲು ಸಾಧ್ಯ. ಯಾವುದೇ ಕಾನೂನಾತ್ಮಕ ವ್ಯಾಜ್ಯದಲ್ಲಿ ಸಿಲುಕಿದ ಕಾರ್ಡ್ ಹಾಗೂ ಅದರಲ್ಲಿನ ಮಾಹಿತಿಯನ್ನು ರದ್ದುಪಡಿಸಲು ಸಾಧ್ಯವಿಲ್ಲ. ■

